# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 803 (818) |
| ಸದಸ್ಯರ ಹೆಸರು | : | ಶ್ರೀ ರಘು. ಆರ್<br>(ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 24.08.2026 |
| ಉತ್ತರಿಸುವ ಸಚಿವರು | : | ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ<br>ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಮೈಸೂರಿನ ಕರ್ನಾಟಕ ಕಲಾ ಮಂದಿರ ಅಭಿವೃದ್ಧಿಪಡಿಸಲು ಸರ್ಕಾರ ನಿಗದಿ ಪಡಿಸಿರುವ ಅನುದಾನವೆಷ್ಟು; (ಮಾಹಿತಿ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: ಕಸಂವಾ 07 ಕಸಧ 2025, ದಿನಾಂಕ:17.04.2025ರಲ್ಲಿ ಮೈಸೂರಿನ ಕರ್ನಾಟಕ ಕಲಾಮಂದಿರ, ರಂಗಾಯಣ ಹಾಗೂ ವಿಶ್ವ ಕನ್ನಡ ಸಮ್ಮೇಳನ ಅತಿಥಿ ಗೃಹ ಕಟ್ಟಡಗಳ ಸಮಗ್ರ ನವೀಕರಣ ಕಾಮಗಾರಿಗಳಿಗೆ ರೂ.14,63,95,000/-ಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ವಿವರವನ್ನು **ಅನುಬಂಧ-1** ರಲ್ಲಿರಿಸಿದೆ. |
| ಆ) | ಸದರಿ ಕಲಾಮಂದಿರದ ನವೀಕರಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆಯೇ; ನವೀಕರಣ ಕಾರ್ಯಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಮಾಹಿತಿ ನೀಡುವುದು) | ಮೈಸೂರು ಕಲಾಮಂದಿರದ ನವೀಕರಣ ಕಾಮಗಾರಿಗೆ ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಅಭಿಯಂತರರು, ಪ್ರಧಾನ ಇಂಜಿನೀಯರ್‌ರವರ ಕಚೇರಿ (ಪ್ರಾಂಸ್ಪಿ) ಯೋಜನೆ ಮತ್ತು ಆಸ್ತಿ ನಿರ್ವಹಣಾ ಕೇಂದ್ರ, ಕೆ.ಆರ್.ವೃತ್ತ, ಬೆಂಗಳೂರು ಇವರು ಯೋಜನಾ ಅನುಷ್ಠಾನಾಧಿಕಾರಿಯಾಗಿರುತ್ತಾರೆ.<br><br>ಸರ್ಕಾರದ ಆದೇಶ ಸಂಖ್ಯೆ: ಕಸಂವಾ 07 ಕಸಧ 2025, ದಿನಾಂಕ:17.12.2025ರಲ್ಲಿ ಮೈಸೂರಿನ ಕರ್ನಾಟಕ ಕಲಾಮಂದಿರ, ರಂಗಾಯಣ ಹಾಗೂ ವಿಶ್ವ ಕನ್ನಡ ಸಮ್ಮೇಳನ ಅತಿಥಿ ಗೃಹ ಕಟ್ಟಡಗಳ ಸಮಗ್ರ ನವೀಕರಣ ಕಾಮಗಾರಿಗಳಿಗೆ ರೂ.7,97,17,000/-ಗಳನ್ನು ಬಿಡುಗಡೆ ಮಾಡಲು ಮಂಜೂರಾತಿ ನೀಡಲಾಗಿದ್ದು, ಅದರನ್ವಯ ಲಭ್ಯವಿದ್ದ ಅನುದಾನದಲ್ಲಿ ರೂ.346.00 ಲಕ್ಷಗಳನ್ನು ಜಿಲ್ಲಾಧಿಕಾರಿ, ಮೈಸೂರು ಜಿಲ್ಲೆ ಇವರಿಗೆ ಬಿಡುಗಡೆ ಮಾಡಲಾಗಿರುತ್ತದೆ.<br><br>ಜಿಲ್ಲಾಧಿಕಾರಿ, ಮೈಸೂರು ಜಿಲ್ಲೆ ಇವರ ದಿನಾಂಕ: 11.03.2026ರ ಪತ್ರದಲ್ಲಿ, ಸರ್ಕಾರದ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ಇವರು ಠೇವಣಿ ವಂತಿಗೆಯಡಿಯಲ್ಲಿನ ಕಾಮಗಾರಿಗಳಿಗೆ ಪೂರ್ಣ ಅನುದಾನವನ್ನು ಠೇವಣಿ ಪಡೆದು ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸಿ ಅನುಮೋದನೆ ಪಡೆದ ನಂತರವೇ ಅನುಷ್ಠಾನಕ್ಕೆ ಕ್ರಮವಹಿಸುವಂತೆ ಸೂಚಿಸಿರುವುದಾಗಿ ತಿಳಿಸಿದ್ದು, ಆದ್ದರಿಂದ ಈಗಾಗಲೇ ಆಡಳಿತಾತ್ಮಕ ಅನುಮೋದನೆ ನೀಡಿ ಬಿಡುಗಡೆ ಮಾಡಲು ಬಾಕಿಯಿರುವ ರೂ.11,17,95,000/-ಗಳನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ. ವಿವರವನ್ನು **ಅನುಬಂಧ-2**ರಲ್ಲಿರಿಸಿದೆ.<br><br>2026-27ನೇ ಸಾಲಿನ ಕ್ರಿಯಾಯೋಜನೆಯಲ್ಲಿ ಸದರಿ ಕಾಮಗಾರಿಗೆ ರೂ.200.00 ಲಕ್ಷಗಳನ್ನು ಹಂಚಿಕೆ ಮಾಡಿಕೊಳ್ಳಲಾಗಿರುತ್ತದೆ. |

| | | |
|---|---|---|
| ಇ) | ಸದರಿ ಕಲಾಮಂದಿರ ಕಾಮಗಾರಿಗಳನ್ನು ಶೀಘ್ರವಾಗಿ ಕೈಗೊಳ್ಳಲು ಸರ್ಕಾರ ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸ ಲಾಗುವುದು? (ಸಂಪೂರ್ಣ ಮಾಹಿತಿ ನೀಡುವುದು) | ಜಿಲ್ಲಾಧಿಕಾರಿ, ಮೈಸೂರು ಜಿಲ್ಲೆ ಇವರ ದಿನಾಂಕ: 11.03.2026ರ ಪತ್ರದಲ್ಲಿ "ಪೂರ್ಣ ಅನುದಾನವನ್ನು ರೇವಣಿ ಮಾಡಿದ ನಂತರ ಟೆಂಡರ್ ಪ್ರಕ್ರಿಯೆ ಮುಗಿಸಿ ಕಾಮಗಾರಿಯನ್ನು ಕೈಗೊಳ್ಳಲಾಗುವುದೆಂದು" ತಿಳಿಸಿರುವುದರಿಂದ ಕ್ರಿಯಾಯೋಜನೆಯಲ್ಲಿ ನಿಗದಿಪಡಿಸಿ ಕೊಂಡಿರುವ ಅನುದಾನವನ್ನು ಹೊರತುಪಡಿಸಿ ಉಳಿಕೆ ರೂ.9,17,95,000/-ಗಳನ್ನು ಹೆಚ್ಚುವರಿಯಾಗಿ ಒದಗಿಸುವ ಕುರಿತಾದ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.<br><br>ಮುಂದುವರೆದು, ಸದರಿ ಕಾಮಗಾರಿಗೆ ಕ್ರಿಯಾಯೋಜನೆಯಲ್ಲಿ ನಿಗದಿಪಡಿಸಿಕೊಂಡಿರುವ ರೂ.200.00 ಲಕ್ಷಗಳು ಹಾಗೂ ಈಗಾಗಲೇ ಬಿಡುಗಡೆ ಮಾಡಿರುವ ರೂ.346.00 ಲಕ್ಷಗಳು ಸೇರಿದಂತೆ ಒಟ್ಟಾರೆ ರೂ.546.00 ಲಕ್ಷಗಳಲ್ಲಿ ಮೊದಲನೇ ಹಂತದ ಕಾಮಗಾರಿಯನ್ನು ಕೈಗೊಳ್ಳುವಂತೆ ಜಿಲ್ಲಾಧಿಕಾರಿ, ಮೈಸೂರು ಜಿಲ್ಲೆ ಇವರಿಗೆ ತಿಳಿಸಲು ಕ್ರಮವಹಿಸಲಾಗುತ್ತಿದೆ. |

ಸಂಖ್ಯೆ: ಕಸಂವಾ 82 ಕವಿಸ 2026

(ಶಿವರಾಜ ಎಸ್. ತಂಗಡಗಿ)
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು

# <u>ಕರ್ನಾಟಕ ಸರ್ಕಾರದ ನಡವಳಿಗಳು</u>

**ವಿಷಯ:** ಮೈಸೂರಿನ ಕರ್ನಾಟಕ ಕಲಾಮಂದಿರ, ರಂಗಾಯಣ ಹಾಗೂ ವಿಶ್ವ ಕನ್ನಡ ಸಮ್ಮೇಳನ ಅತಿಥಿಗೃಹ ಕಟ್ಟಡಗಳ ಸಮಗ್ರ ನವೀಕರಣ ಕಾಮಗಾರಿಗೆ ಅನುದಾನ ಮಂಜೂರು ಮಾಡುವ ಕುರಿತು.

**ಓದಲಾಗಿದೆ:** ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ಪತ್ರ ಸಂಖ್ಯೆ ಸನಿಕ/ಕಸಂಇ/ಮೈಸೂರು/ಕನ-29/2024-25 ದಿನಾಂಕ: 26-12-2024.

******

**<u>ಪ್ರಸ್ತಾವನೆ:-</u>**

ಮೇಲೆ ಓದಲಾದ ಪತ್ರದಲ್ಲಿ, ಮೈಸೂರಿನ ಸಾಂಸ್ಕೃತಿಕ ಕೇಂದ್ರವಾಗಿರುವ ಕರ್ನಾಟಕ ಕಲಾಮಂದಿರ, ಮೈಸೂರು ರಂಗಾಯಣ ಹಾಗೂ ವಿಶ್ವಕನ್ನಡ ಸಮ್ಮೇಳನ ಅತಿಥಿ ಗೃಹಗಳು 1985ನೇ ಇಸವಿಯಲ್ಲಿ ನಿರ್ಮಿಸಲಾಗಿದ್ದು, ಅಂದಿನಿಂದ ಇದುವರೆಗೆ ಸಣ್ಣಪುಟ್ಟ ನಿರ್ವಹಣಾ ಕಾಮಗಾರಿ ಹೊರತುಪಡಿಸಿದರೆ ಸಮಗ್ರವಾಗಿ ನವೀಕರಣ ಕಾಮಗಾರಿ ನಡೆದಿರುವುದಿಲ್ಲ. ನಿರಂತರವಾಗಿ ರಾಜ್ಯ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದ ಸಾಂಸ್ಕೃತಿಕ ಚಟುವಟಿಕೆಗಳು ನಡೆಯುವ ಇಲ್ಲಿ ಹಲವಾರು ಗಣ್ಯರು, ಅತಿಗಣ್ಯರು ನಿರಂತರ ಭಾಗವಹಿಸುವ ಸ್ಥಳಗಳಾಗಿದ್ದು, ಇಲ್ಲಿನ ಕರ್ನಾಟಕ ಕಲಾಮಂದಿರದ ಕೇಂದ್ರೀಕೃತ ಹವಾನಿಯಂತ್ರಣ ವ್ಯವಸ್ಥೆ ದುರಸ್ತಿಗೊಳಿಸುವ ಬಗ್ಗೆ, ಕಲಾಮಂದಿರದ ಆಸನಗಳ ಬದಲಾವಣೆ, ವೇದಿಕೆಯ ಮರದ ನೆಲಹಾಸು ಬದಲಾವಣೆ ಹಾಗೂ ಕರ್ನಾಟಕ ಕಲಾಮಂದಿರ ಆವರಣದಲ್ಲಿರುವ ಎಲ್ಲಾ ಶೌಚಾಲಯಗಳ ನವೀಕರಣ ಕಾಮಗಾರಿಗೆ, ಕುರ್ಚಿಗಳ ಬದಲಾವಣೆ, ವಾಲ್‌ಪ್ಯಾನಲಿಂಗ್ ಬದಲಾವಣೆ, ಕಟ್ಟಡದ ಸೋರಿಕೆ ತಡೆಯಲು ಕಾಮಗಾರಿ, ವಿಶೇಷ ಚೇತನರ ಬಳಕೆಗೆ ಲಿಫ್ಟ್ ಅಳವಡಿಕೆ ರಂಗಾಯಣದ ಬಿ.ವಿ.ಕಾರಂತ ರಂಗಚಾವಡಿ ನವೀಕರಣ, ಶ್ರೀರಂಗ ವೇದಿಕೆ ನವೀಕರಣ, ಕುಟೀರ, ಲಂಕೇಶ್ ವೇದಿಕೆ ನವೀಕರಣ, ಶೌಚಾಲಯಗಳ ನವೀಕರಣ ಹಾಗೂ ವಿಶ್ವ ಕನ್ನಡ ಸಮ್ಮೇಳನ ಅತಿಥಿ ಗೃಹಗಳ ಸಮಗ್ರ ನವೀಕರಣ ಇತ್ಯಾದಿ ಕಾಮಗಾರಿ ನಿರ್ವಹಿಸಲು ತಗಲಬಹುದಾದ ಅಂದಾಜು ವೆಚ್ಚ ರೂ.14,63,95,000/-ಗಳನ್ನು ಮಂಜೂರು ಮಾಡುವಂತೆ ಕೋರುತ್ತಾ, ಇದರಲ್ಲಿ ಇತ್ತೀಚೆಗೆ ನವೀಕರಣ ಕಾಮಗಾರಿ ಕೈಗೊಳ್ಳಲಾಗಿರುವ ಯಾವುದೇ ಕಾಮಗಾರಿಗಳು ಪುನರಾವರ್ತನೆಯಾಗಿಲ್ಲದಿರುವುದರಿಂದ ಅಂದಾಜು ವೆಚ್ಚಪಟ್ಟಿಯನ್ನು ಹಾಗೂ ಸದರಿ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿ ಅನುದಾನ ಮಂಜೂರು ಮಾಡುವಂತೆ, ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರಿ ಆದೇಶ ಸಂಖ್ಯೆ: ಕಸಂವಾ 07 ಕಸಧ 2025,</u>**
**<u>ಬೆಂಗಳೂರು, ದಿನಾಂಕ:17.04.2025.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಮೈಸೂರಿನ ಕರ್ನಾಟಕ ಕಲಾಮಂದಿರ, ರಂಗಾಯಣ ಹಾಗೂ ವಿಶ್ವ ಕನ್ನಡ ಸಮ್ಮೇಳನ ಅತಿಥಿ ಗೃಹ ಕಟ್ಟಡಗಳ ಸಮಗ್ರ ನವೀಕರಣಕ್ಕೆ ಅನುಬಂಧದಲ್ಲಿರುವಂತೆ ಕಾಮಗಾರಿಗಳಿಗೆ ಅಗತ್ಯವಿರುವ ಅನುದಾನ ರೂ.14,63,95,000/-(ರೂಪಾಯಿ ಹದಿನಾಲ್ಕು ಕೋಟಿ ಅರವತ್ಮೂರು ಲಕ್ಷ ತೊಂಭತ್ತೈದು ಸಾವಿರಗಳು ಮಾತ್ರ)ಗಳಿಗೆ ಈ ಕೆಳಕಂಡ ಷರತ್ತಿಗೊಳಪಟ್ಟು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

**<u>ಷರತ್ತುಗಳು:</u>**

1. ಈ ಅನುದಾನವನ್ನು 2025-26ನೇ ಸಾಲಿನ ಕ್ರಿಯಾಯೋಜನೆಯಲ್ಲಿ ಅಳವಡಿಸಿಕೊಳ್ಳತಕ್ಕದ್ದು.

2. ಮಂಜೂರು ಮಾಡಿರುವ ಹಣವನ್ನು ಅದೇ ಉದ್ದೇಶಕ್ಕೆ ಬಳಸತಕ್ಕದ್ದು.

3. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಹಾಗೂ ನಿಯಮಗಳು 2000 ಅನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

ಈ ಆದೇಶವನ್ನು ಸಚಿವ ಸಂಪುಟ ಟಿಪ್ಪಣಿ ಸಂಖ್ಯೆ:ಸಿ.174/2025, ದಿನಾಂಕ:25.03.2025ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

S. Geeta 17/4/2025

(ಎಸ್. ಗೀತಾಬಾಯಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಸಂಸ್ಕೃತಿ)

**ಇವರಿಗೆ:-**

1. ಮಹಾಲೇಖಪಾಲರು, (ಎ & ಇ), (ಜಿ&ಎಸ್ ಎಸ್ ಎ), (ಇ &ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2. ಆಯುಕ್ತರು, ಖಜಾನೆ ಆಯುಕ್ತಾಲಯ, ಕೆ.ಪಿ.ಸಿ.ಎಲ್, 6ನೇ ಮಹಡಿ, ಔಷಧ ನಿಯಂತ್ರಣ ಕಚೇರಿ, ಪ್ಯಾಲೇಸ್ ರಸ್ತೆ, ಬೆಂಗಳೂರು.
3. ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು (ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಮುಖಾಂತರ).
4. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಬೆಂಗಳೂರು.
5. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು.
6. ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಕನ್ನಡ ಮತ್ತು ಸಂಸ್ಕೃತಿ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-7/ಗಣಕ ಕೋಶ), ವಿಧಾನಸೌಧ, ಬೆಂಗಳೂರು.
8. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
9. ಸರ್ಕಾರದ ಉಪಕಾರ್ಯದರ್ಶಿಯವರ ಆಪ್ತ ಶಾಖೆ, ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ.
10. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಸರ್ಕಾರದ ಆದೇಶ ಸಂಖ್ಯೆ: ಕಸಂಪಾ 07 ಕಸಧ 2025,
ದಿನಾಂಕ:17.04.2025ಕ್ಕೆ ಅನುಬಂಧ

| ಕ್ರ.ಸಂ | ಕಾಮಗಾರಿಗಳ ವಿವರ | ಮೊತ್ತ |
|---|---|---|
| 1 | Auditorium Acoustic wall panel, Acoustic False ceiling, Acoustic Wooden Panels to Karnataka Kalamandira. | 1,65,79,537.00 |
| 2. | Public Address System to Karnataka Kalamandira, Vinoba Road, Mysuru. | 40,46,816.00 |
| 3. | Essential Electrical works to Karnataka Kalamandira, Vinoba Road, Mysuru. | 35,00,000.00 |
| 4. | Disability access Lift to Karnataka Kalamandira, Vinoba Road, Mysuru. | 49,57,500.00 |
| 5. | Replacing of Old Auditorium Chairs by Hunsur plywood Ergonomically designed push with up holder chairs to Karnataka Kalamandira, Vinoba Road, Mysuru. | 1,65,75,165.00 |
| 6. | Repair and Renovation to BV Karanth Chavadi, Rangayana Godown, Shriranga Hall, Lankesh Multipurpose hall, Children Class room, Library area, Director and Deputy Director Chamber and Other Allied work at Rangayana, Karnataka Kalamandira primisses, Vinoba Road, Mysuru | 1,57,89,236.00 |
| 7. | Repair and Renovation of wall Paneling, Aluminum Composite Paneling to Front Elevation of Karanataka Kalamandira. | 92,76,145.00 |
| 8. | Face Lifting of General Toilet Block, Green room toilet block, water supply, sanitory works to Karanataka Kalamandira. | 60,32,256.00 |
| 9. | Repair and Renovation of Acoustic Wall Panel, Painting, Water proofing work to Kirurangamandira. | 24,47,354.00 |
| 10. | Provision for Ongrid Solar system 550 WP Solar PV Module, String Inverter, Structure, Bidirectional meter and other accessories to Karnataka Kalamandira, Mysuru. | 49,89,564.00 |
| 11. | Repair and Renovation Work to Karanataka Kalamandira and Rangayana (Vishwakannada Sammelana) Guest Houses at Devaraja Mohalla, Hunsur Road, Mysuru City. | 1,20,39,733.00 |

| | | |
|---|---|---|
| 12. | Variable Refrigerant Flow modular type air-conditioning system to Karnataka Kalamandira, Vinoba Road, Mysuru. | 1,50,41,000.00 |
| 13. | Electrical work, Polishing and Repair to Main Stage of Auditorium to Karnataka Kalamandira, Hunsur Road, Mysuru City. | 87,95,000.00 |
| 14. | Fire Fighting system to Karnataka Kalamandira, Vinoba Road, Mysuru City. | 15,55,550.00 |
| | Net Total | 12,16,24,856.00 |
| | Add Quality Control, Technical Scrutiny, Third Party Inspection At 2% | 24,32,497.12 |
| | Sub Total | 12,40,57,353.12 |
| | Add GST 18% | 2,23,30,323.00 |
| | Miscellaneous and rounding off | 7,323.32 |
| | **Grand Total: Total cost of the Project** | **14,63,95,000.00** |

S. Geetha 17/11/2025
(ಎಸ್. ಗೀತಾಬಾಯಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಸಂಸ್ಕೃತಿ)

ಪ.ತ.

ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳ ಕಾರ್ಯಾಲಯ, ಮೈಸೂರು – 570005
**Office of the Deputy Commissioner & District Magistrate, Mysuru – 570005**
ದೂರವಾಣಿ ಸಂಖ್ಯೆ: 0821-2422302, ಫ್ಯಾಕ್ಸ್ ಸಂಖ್ಯೆ: 2420192 ಇ-ಮೇಲ್: dcofficemysuru@gmail.com

**ಸಂಖ್ಯೆ:** ಸ.ನಿ.ಕ/ಕ.ಸಂ.ಇ/ಮೈಸೂರು/ಕ.ನ-29/2025-26 **ದಿನಾಂಕ:** 11-03-2026

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು - 02

**ಮಾನ್ಯರೆ,**

**ವಿಷಯ:** ಮೈಸೂರಿನ ಕರ್ನಾಟಕ ಕಲಾಮಂದಿರ, ರಂಗಾಯಣ ಹಾಗೂ ವಿಶ್ವಕನ್ನಡ ಸಮ್ಮೇಳನ ಅತಿಥಿ ಗೃಹ ಕಟ್ಟಡಗಳ ಸಮಗ್ರ ನವೀಕರಣ ಕಾಮಗಾರಿಗಳಿಗೆ ಅಗತ್ಯವಿರುವ ಅನುದಾನ ಬಿಡುಗಡೆ ಮಾಡುವ ಕುರಿತು.

**ಉಲ್ಲೇಖ:** 1. ಸರ್ಕಾರದ ಆದೇಶ ಸಂಖ್ಯೆ: ಕಸಂವಾ 07 ಕಸಧ 2025, ದಿ. 17-04-2025
2. ಸರ್ಕಾರದ ಆದೇಶದ ಸಂಖ್ಯೆ: ಕಸಂವಾ 07 ಕಸಧ 2025 ದಿನಾಂಕ: 17-12-2025
3. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಇವರ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಡಿಕೆಸಿ: 25026/10/2025 ದಿನಾಂಕ: 13-01-2026
4. ಈ ಕಚೇರಿಯ ಅಧಿಕೃತ ಜ್ಞಾಪನ ಪತ್ರ ಸಮ ಸಂಖ್ಯೆ ದಿನಾಂಕ: 19-01-2026
5. ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 99 ವೆಚ್ಚ-7/2025 ದಿನಾಂಕ: 23-02-2026
6. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಡಿಕೆಸಿ:25026/10/2025 ದಿನಾಂಕ: 25-02-2026
7. ಈ ಕಚೇರಿ ಪತ್ರ ಸಮ ಸಂಖ್ಯೆ ದಿನಾಂಕ: 03-03-2026
8. ಮುಖ್ಯ ಇಂಜಿನಿಯರ್, ಯೋಜನೆ ಮತ್ತು ರಸ್ತೆಗಳ ಆಸ್ತಿ ನಿರ್ವಹಣಾ ಕೇಂದ್ರ, ಲೋಕೋಪಯೋಗಿ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: PWD/1875/PRAMC/2025-26 ದಿನಾಂಕ: 07-03-2026
9. ಸರ್ಕಾರದ ಆದೇಶ ಸಂಖ್ಯೆ: ಲೋಇ 11 ಬಿಜಿಎಂ 2025, ಬೆಂಗಳೂರು ದಿನಾಂಕ: 23-02-2026

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಸರ್ಕಾರದ ಆದೇಶದ ಪತ್ರದಲ್ಲಿ ಮೈಸೂರಿನ ಕರ್ನಾಟಕ ಕಲಾಮಂದಿರ, ರಂಗಾಯಣ ಹಾಗೂ ವಿಶ್ವ ಕನ್ನಡ ಸಮ್ಮೇಳನ ಅತಿಥಿ ಗೃಹ ಕಟ್ಟಡಗಳ ಸಮಗ್ರ ನವೀಕರಣ ಕಾಮಗಾರಿಗಳಿಗೆ ಅಗತ್ಯವಿರುವ ಅನುದಾನ **ರೂ.14,63,95,000/-**ಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.

ಉಲ್ಲೇಖ (2)ರ ಸರ್ಕಾರದ ಆದೇಶದ ಪತ್ರದಲ್ಲಿ ಸದರಿ ಕಾಮಗಾರಿಗೆ 2025-26ನೇ ಸಾಲಿನ ಲೆಕ್ಕಶೀರ್ಷಿಕೆ: 5475-00-115-0-02-132ರಡಿ ಲಭ್ಯವಿರುವ ಅನುದಾನದಿಂದ **ರೂ.7,97,17,000/-**(ರೂಪಾಯಿ ಏಳು ಕೋಟಿ ತೊಂಬತ್ತೇಳು ಲಕ್ಷದ ಹದನೇಳು ಸಾವಿರ ಮಾತ್ರ) ಗಳನ್ನು ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರಿಗೆ ಬಿಡುಗಡೆ ಮಾಡಲು ಮಂಜೂರಾತಿ ನೀಡಿ ಆದೇಶಿಸಲಾಗಿದೆ. ಆದರೆ ಉಲ್ಲೇಖ (3)ರಲ್ಲಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಇವರ ಕಚೇರಿ ಅಧಿಕೃತ ಜ್ಞಾಪನದಲ್ಲಿ ಲೆಕ್ಕಶೀರ್ಷಿಕೆ: **5475-00-115-0-02-132ರಡಿ** ಲಭ್ಯವಿರುವ **ರೂ.3,46,00,000/-(ರೂಪಾಯಿ ಮೂರು ಕೋಟಿ ನಲವತ್ತ ಆರು ಲಕ್ಷ ಮಾತ್ರ)** ಗಳನ್ನು ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರಿಗೆ ಬಿಡುಗಡೆ ಮಾಡಲಾಗಿದೆ.

ಅದರಂತೆ ಉಲ್ಲೇಖ (4)ರ ಈ ಕಚೇರಿ ಅಧಿಕೃತ ಜ್ಞಾಪನ ಪತ್ರದಲ್ಲಿ ಸದರಿ ಕಾಮಗಾರಿಗೆ ಪ್ರಸ್ತುತ ಬಿಡುಗಡೆಯಾಗಿರುವ ಮೊತ್ತ **ರೂ.3,46,00,000/-(ರೂಪಾಯಿ ಮೂರು ಕೋಟಿ ನಲವತ್ತ ಆರು ಲಕ್ಷ ಮಾತ್ರ)** ಗಳನ್ನು ಕಾರ್ಯಪಾಲಕ ಅಭಿಯಂತರರು, ಪ್ರಧಾನ ಇಂಜಿನಿಯರ್ ರವರ ಕಚೇರಿ (ಪ್ರಾಂಸಿ), ಯೋಜನೆ ಮತ್ತು ರಸ್ತೆಗಳ ಆಸ್ತಿ ನಿರ್ವಹಣಾ ಕೇಂದ್ರ, ಕೆ.ಆರ್.ವೃತ್ತ, ಬೆಂಗಳೂರು ಇವರಿಗೆ ಕೆ2 ಮೂಲಕ ಪಾವತಿಮಾಡಿ ಕಾರ್ಯಾದೇಶ ನೀಡಲಾಗಿರುತ್ತದೆ. ಆದರೆ ಇದುವರೆವಿಗೂ ಸದರಿ ಕಾಮಗಾರಿ ಪ್ರಾರಂಭವಾಗಿರುವುದಿಲ್ಲ. ಮುಂದುವರೆದು ಈ ಸಂಬಂಧ ಪ್ರಸ್ತುತ ಉಲ್ಲೇಖ (5)ರ ಆರ್ಥಿಕ ಇಲಾಖೆಯ ಟಿಪ್ಪಣಿ ಹಾಗೂ ಉಲ್ಲೇಖ (6)ರ ತಮ್ಮ ಪತ್ರದಲ್ಲಿ ಕೋರಿರುವಂತೆ ಮೈಸೂರಿನ ಕರ್ನಾಟಕ ಕಲಾಮಂದಿರ, ರಂಗಾಯಣ ಹಾಗೂ ವಿಶ್ವ ಕನ್ನಡ ಸಮ್ಮೇಳನ ಅತಿಥಿ ಗೃಹ ಕಟ್ಟಡಗಳ ಸಮಗ್ರ ನವೀಕರಣ ಕಾಮಗಾರಿಗೆ ಸಂಬಂಧಿಸಿದಂತೆ ಪ್ರಸ್ತುತ ಹಂತದ ವಿವರವನ್ನು ಒದಗಿಸುವಂತೆ ಯೋಜನಾ ಅನುಷ್ಠಾನಾಧಿಕಾರಿಗಳಾದ ಕಾರ್ಯಪಾಲಕ ಅಭಿಯಂತರರು, ಪ್ರಧಾನ ಇಂಜಿನಿಯರ್ ರವರ ಕಚೇರಿ (ಪ್ರಾಂಸಿ), ಯೋಜನೆ ಮತ್ತು ರಸ್ತೆಗಳ ಆಸ್ತಿ ನಿರ್ವಹಣಾ ಕೇಂದ್ರ, ಕೆ.ಆರ್.ವೃತ್ತ, ಬೆಂಗಳೂರು ಇವರಿಗೆ ಅತ್ಯಂತ ತುರ್ತಾಗಿ ಮಾಹಿತಿಯನ್ನು ನೀಡಬೇಕಾಗಿ ಉಲ್ಲೇಖ (7)ರ ಪತ್ರದಲ್ಲಿ ಕೋರಲಾಗಿರುತ್ತದೆ.

ಮುಂದುವರೆದು ಉಲ್ಲೇಖ (8)ರ ಪತ್ರದಲ್ಲಿ, ಮುಖ್ಯ ಇಂಜಿನಿಯರ್, ಯೋಜನೆ ಮತ್ತು ರಸ್ತೆಗಳ ಆಸ್ತಿ ನಿರ್ವಹಣಾ ಕೇಂದ್ರ, ಲೋಕೋಪಯೋಗಿ ಇಲಾಖೆ, ಬೆಂಗಳೂರು ಇವರು ಉಲ್ಲೇಖ (4)ರ ಅಧಿಕೃತ ಜ್ಞಾಪನ ಪತ್ರದಲ್ಲಿ "ಸದರಿ ಕಾಮಗಾರಿಗೆ ಪ್ರಸ್ತುತ **ರೂ.3,46,00,000/-(ರೂಪಾಯಿ ಮೂರು ಕೋಟಿ ನಲವತ್ತ ಆರು ಲಕ್ಷ ಮಾತ್ರ)** ಗಳನ್ನು ಕೆ2 ಮೂಲಕ ಈಗಾಗಲೇ ಪಾವತಿ ಮಾಡಲಾಗಿರುತ್ತದೆ ಎಂದು ತಿಳಿಸಲಾಗಿರುತ್ತದೆ ಹಾಗೂ ಸದರಿ ಮೊತ್ತವು ಈ ಕಚೇರಿಗೆ ಠೇವಣಿಯಾಗಿರುತ್ತದೆ. ಅದರಂತೆ ಕಾಮಗಾರಿಯು ಪ್ರಸ್ತುತ ಟೆಂಡರ್ ಪ್ರಕ್ರಿಯೆಯಲ್ಲಿರುತ್ತದೆ. ಹಾಗೂ ಸರ್ಕಾರದ ಆದೇಶ ಸಂಖ್ಯೆ: ಲೋಇ 11 ಬಿಜಿಎಂ 2025, ಬೆಂಗಳೂರು ದಿನಾಂಕ: 23-02-2026 ರಲ್ಲಿ ಸರ್ಕಾರದ ಕಾರ್ಯದರ್ಶಿಗಳು ಲೋಕೋಪಯೋಗಿ ಇಲಾಖೆ ರವರು ಠೇವಣಿವಂತಿಕೆಯಡಿಯಲ್ಲಿನ ಕಾಮಗಾರಿಗಳಿಗೆ ಪೂರ್ಣ ಅನುದಾನವನ್ನು ಠೇವಣಿ ಪಡೆದು ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸಿ ಅನುಮೋದನೆ ಪಡೆದ ನಂತರವೇ ಅನುಷ್ಠಾನಕ್ಕೆ ಕ್ರಮ ವಹಿಸುವಂತೆ ಸೂಚಿಸಿರುತ್ತಾರೆ. ಆದ ಕಾರಣ ಸದರಿ ಕಾಮಗಾರಿಗೆ ಉಳಿಕೆ ಮೊತ್ತ **ರೂ.11,17,95,000/-(ರೂಪಾಯಿ ಹನ್ನೊಂದು ಕೋಟಿ ಹದಿನೇಳು ಲಕ್ಷದ ತೊಂಬತ್ತೈದು ಸಾವಿರ ಮಾತ್ರ)** ಗಳ ಅನುದಾನವನ್ನು ಬಿಡುಗಡೆಗೊಳಿಸಲು ಕೋರಲಾಗಿದೆ. ತಾವು ಪೂರ್ಣ ಅನುದಾನವನ್ನು ಠೇವಣಿ ಮಾಡಿದ ನಂತರ ಟೆಂಡರ್ ಪ್ರಕ್ರಿಯೆ ಮುಗಿಸಿ ಕಾಮಗಾರಿಯನ್ನು ಕೈಗೊಳ್ಳಲಾಗುವುದೆನ್ನುವ ಮಾಹಿತಿಯನ್ನು ಈ ಮೂಲಕ ತಮ್ಮ ಘನ ಅವಗಾಹನೆಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ" ಎಂದು ತಿಳಿಸಿ ಪತ್ರ ಬರೆದಿರುತ್ತಾರೆ. ಸದರಿ ಪತ್ರವನ್ನು ಹಾಗೂ ಉಲ್ಲೇಖ (9)ರ ಸರ್ಕಾರದ ಆದೇಶದ ಪತ್ರವನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ತಮ್ಮ ಅವಗಾಹನೆಗೆ ಕಳುಹಿಸಿದೆ.

**(ಜಿ.ಲಕ್ಷ್ಮೀಕಾಂತ ರೆಡ್ಡಿ, ಭಾ.ಆ.ಸೇ)**
**ಜಿಲ್ಲಾಧಿಕಾರಿ**
ಮೈಸೂರು ಜಿಲ್ಲೆ, ಮೈಸೂರು

**ಪ್ರತಿಯನ್ನು**

1 ಕಾರ್ಯಪಾಲಕ ಅಭಿಯಂತರರು, ಪ್ರಧಾನ ಇಂಜಿನಿಯರ್ ರವರ ಕಚೇರಿ (ಪ್ರಾಂಸಿ), ಯೋಜನೆ ಮತ್ತು ರಸ್ತೆಗಳ ಆಸ್ತಿ ನಿರ್ವಹಣಾ ಕೇಂದ್ರ, 4ನೇ ಹಂತ, ಪಿ.ಡಬ್ಲ್ಯೂ.ಡಿ ಅನೆಕ್ಸ್ ಬಿಲ್ಡಿಂಗ್, ಕೆ.ಆರ್.ವೃತ್ತ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಕಳುಹಿಸಿದೆ
2 ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ಜಿಲ್ಲೆ, ಮೈಸೂರು ಇವರಿಗೆ ಮಾಹಿತಿ ಹಾಗೂ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
3 ಕಚೇರಿ ಕಡತಕ್ಕೆ.